ಓ॰ಎಸ್॰ನಂ. *74/2021*

**ಪಿ.ಡಬ್ಲ್ಯೂ- *1***

**ದಿನಾಂಕ॰ *26-09-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ॰ ವಾದಿ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದ.**

ನಾನು ನ್ಯಾಯಾಲಯಕ್ಕೆ ಮನೆದಳಗಳ ಮಂಜೂರಿ ಸರ್ಟಿಫಿಕೇಟ್ ನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*1* ಎಂದು, ಅಸಸ್ ಮೆಂಟ್ ಎಕ್ಸಟ್ರಾಕ್ಟನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*2* ಎಂದು, ಕಂದಾಯ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*3* ಎಂದು, ಬೇಲೆನಹಳ್ಳಿ ಗ್ರೂಪ್ ಪಂಚಾಯಿತಿಯಿಂದ ನೀಡಿದ ಮನೆ ಕಟ್ಟುವ ಲೈಸನ್ಸ್ ನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*4* ಎಂದು, ಮನೆ ಕಂದಾಯದ ರಸೀದಿ ಪಟ್ಟಾವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*5* ಎಂದು, ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*6* ಎಂದು, ಕೆನರಾ ಬ್ಯಾಂಕ್ ನವರು ನೀಡಿದ ಕಂದಾಯ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*7* ಎಂದು, ಮನೆ ಕಂದಾಯದ ಖಾತೆ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*8* ಎಂದು, ಪುರಸಭೆ, ತರೀಕೆರೆಯವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*9* ಎಂದು, ತರೀಕೆರೆ ಪೊಲೀಸರು ನೀಡಿರುವ ಒಂದು ಸ್ವೀಕೃತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*10* ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*11* ಎಂದು, ತರೀಕೆರೆ ಪೊಲೀಸರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-*12* ಎಂದು, ದಿನಾಂಕ॰ *30-04-2020* ರಂದು ತರೀಕೆರೆ ಪೊಲೀಸರು ನೀಡಿರುವ ಎರಡು ಸ್ವೀಕೃತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-*13* ಮತ್ತು ನಿಪಿ-*14* ಎಂದು ಗುರುತಿಸಲಾಯಿತು.

***ಪಾಟೀ ಸವಾಲು॰ ಪ್ರತಿವಾದಿ ಪರ ವಕೀಲ*ರಿಂದ॰**

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯ್ತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***